ಪಿ.ಡಬ್ಲ್ಯೂ ಃ **3**

ಸಾಕ್ಷಿಗೆ ದಿನಾಂಕಃ **23.07.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು **: 2** ನೇ ಎದುರುದಾರರ ಪರಃ ಶ್ರೀ ವಕೀಲರ ಮೂಲಕ

ಮೃತ ರವಿ ರವರಿಗೆ ವೇತನವನ್ನು ಅವರ ಬ್ಯಾಂಕ್ ಖಾತೆಯ ಮೂಲಕ ಪಾವತಿ ಮಾಡುತ್ತಿದ್ದೆವು. ರವಿಯವರ ಹಾಜರಾತಿ ದಾಖಲಾತಿಯನ್ನು ಮತ್ತು ಅವರ ಗುರುತಿನ ಚೀಟಿಯನ್ನು ಹಾಜರುಪಡಿಸಲು ತಯಾರು ಇರುತ್ತೇನೆ. ರವಿಯವರು ಎಷ್ಟು ವರ್ಷಗಳಿಂದ ನಮ್ಮ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸಿರುತ್ತಾರೆ ಎಂಬ ಬಗ್ಗೆ ದಾಖಲೆಯನ್ನು ನೋಡಬೇಕು. ಮೃತ ವ್ಯಕ್ತಿಗೆ ಬರುತ್ತಿದ್ದ ಪಿ.ಎಫ್. ಮತ್ತು ಇತರೆ ಮೊತ್ತವನ್ನು ಕಟಾವು ಮಾಡಿ **45,551/-** ರೂಪಾಯಿ ವೇತನ ಬರುತ್ತಿತ್ತು. ರವಿಯವರು ನಮ್ಮ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸದ ಕಾರಣ ಅವರ ಗುರುತಿಸನ ಚೀಟಿ ಮತ್ತು ಹಾಜರಾತಿ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ **20** ರಲ್ಲಿ ಇರುವ ಸಹಿ ನನ್ನದಾಗಿದ್ದು, ಅದರಲ್ಲಿರುವ ಮೊಹರು ನಮ್ಮ ಸಂಸ್ಥೆಯದ್ದಾಗಿರುತ್ತದೆ. ಮೃತ ವ್ಯಕ್ತಿಯು ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡದೇ ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.